॥ ಶ್ರೀಮದ್ಯೋಗಾನಂದ ಗುರುನರಸಿಂಹ ಪ್ರಸನ್ನ ॥

# ದಕ್ಷಿಣ ಕನ್ನಡ ಕೂಟ ಬ್ರಾಹ್ಮಣರ ಮಿತ್ರ ಮಂಡಳಿ (ರಿ.) ಬೆಂಗಳೂರು

**(ನೋಂದಣಿ ಸಂಖ್ಯೆ 175 / 63–64)**

**12, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು–560 004**

## 2025–26ನೇ ಸಾಲಿನ
## 57ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ಸದಸ್ಯ ಮಹನೀಯರೇ,

ದಕ್ಷಿಣ ಕನ್ನಡ ಕೂಟ ಬ್ರಾಹ್ಮಣರ ಮಿತ್ರ ಮಂಡಳಿ (ರಿ.), ಬೆಂಗಳೂರು ಇದರ 2025–26ನೇ ಸಾಲಿಗೆ ಸಂಬಂಧಿಸಿದ ಐವತ್ತೇಳನೇ ಸರ್ವಸದಸ್ಯರ ಸಭೆಯನ್ನು **ದಿನಾಂಕ 13–09–2026** ರಂದು **ಭಾನುವಾರ** ಬೆಳಿಗ್ಗೆ **10:00** ಗಂಟೆಗೆ ಸಂಸ್ಥೆಯ ಗೌ॥ ಅಧ್ಯಕ್ಷರಾದ **ಡಾ॥ ಪಿ. ವಿಷ್ಣುಮೂರ್ತಿ ಐತಾಳರ** ಅಧ್ಯಕ್ಷತೆಯಲ್ಲಿ **ಶ್ರೀ ಗುರುನರಸಿಂಹ ಕಲ್ಯಾಣ ಮಂದಿರ,** ನಂ. 12, ಬುಲ್ ಟೆಂಪಲ್ ರಸ್ತೆ, ಬೆಂಗಳೂರು – 560 004 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ತಾವುಗಳು ಆಗಮಿಸಿ ಸಭಾ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ದಕ್ಷಿಣ ಕನ್ನಡ ಕೂಟ ಬ್ರಾಹ್ಮಣರ ಮಿತ್ರ ಮಂಡಳಿಯ**
**ಆಡಳಿತ ಮಂಡಳಿ ಪರವಾಗಿ**
ಸಹಿ/–
**ಡಾ॥ ಕೆ. ಸುರೇಶ ಐತಾಳ**
ಗೌ॥ ಕಾರ್ಯದರ್ಶಿ

ಬೆಂಗಳೂರು–560 004
ದಿನಾಂಕ : 20–08–2026

## ಕಾರ್ಯಸೂಚಿ :

1. ಪ್ರಾರ್ಥನೆ
2. ಸ್ವಾಗತ
3. ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
4. ಸಂತಾಪ ಸೂಚನೆ
5. ತಾ॥ 21–09–2025ರಂದು ನಡೆದ 56ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿ ಸ್ಥಿರೀಕರಣ.
6. 2025–2026ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ, ಚರ್ಚೆ ಮತ್ತು ಅನುಮೋದನೆ.
7. 2025–2026ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ವರದಿ ಮಂಡನೆ ಮತ್ತು ಅನುಮೋದನೆ.
8. 2026–27ನೇ ಸಾಲಿಗೆ ಆಯ–ವ್ಯಯ ಮುಂಗಡ ಪತ್ರದ ವರದಿ ಮಂಡನೆ ಮತ್ತು ಅನುಮೋದನೆ ಹಾಗೂ 2025–26ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಆದ ಖರ್ಚಿಗೆ ಘಟನೋತ್ತರ ಅನುಮೋದನೆ.
9. ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿಷ್ಕರ್ಶೆ.
10. ಸಭೆಗೆ 7 ದಿನ ಮುಂಚಿತವಾಗಿ (ಬೈಲಾ ನಿಯಮ 7ರ ಅನುಸಾರ) ಬಂದ ಪತ್ರಗಳು.
11. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.
12. ಅಧ್ಯಕ್ಷರ ಭಾಷಣ
13. ಧನ್ಯವಾದ ಸಮರ್ಪಣೆ.

## ಸದಸ್ಯರ ಗಮನಕ್ಕೆ :

- ಸದಸ್ಯ ಮಹನೀಯರು ಸಭೆಯಲ್ಲಿ ಭಾಗವಹಿಸುವಾಗ ಸದಸ್ಯತ್ವ ಕಾರ್ಡ್ ತಮ್ಮೊಂದಿಗೆ ತರಬೇಕಾಗಿ ವಿನಂತಿ. ಸದಸ್ಯತ್ವ ಕಾರ್ಡ್ ಹಾಜರುಪಡಿಸಿದವರಿಗೆ ಮಾತ್ರ ಪ್ರವೇಶ. ಸದಸ್ಯತ್ವ ಕಾರ್ಡ್ ಕಳೆದಿದ್ದರೆ, ಸಂಘದ ಕಛೇರಿಯಲ್ಲಿ ತಮ್ಮ ಒಂದು ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಿ, ಸದಸ್ಯತ್ವ ಕಾರ್ಡ್ ಪಡೆಯಬಹುದು. ಸದಸ್ಯತ್ವ ಕಾರ್ಡ್ ಪಡೆಯದ ಸದಸ್ಯರು ಸಂಸ್ಥೆಯ ಕಛೇರಿಯಲ್ಲಿ ಸದಸ್ಯತ್ವ ಕಾರ್ಡ್ ಪಡೆಯಬಹುದು.
- ಕಾರ್ಯಾಲಯ ಸಮಯ : ಬೆಳಿಗ್ಗೆ 8:00 ರಿಂದ 12:00 ಮತ್ತು ಸಂಜೆ 4:00 ರಿಂದ 8:00.
- ಚರ್ಚಿಸಬೇಕಾದ ವಿಚಾರ ಸೂಚಿಸುವವರು ಸಂಘದ ಉಪನಿಯಮ 7ರ ಮೇರೆಗೆ ಸಭೆಗೆ 7 ದಿನ ಮುಂಚಿತವಾಗಿ ವಿಷಯವನ್ನು ಲಿಖಿತ ಮೂಲಕ ಸಂಘದ ಕಛೇರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.
- ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳ ಮುದ್ರಿತ ಪುಸ್ತಕವನ್ನು ಸದಸ್ಯರು ಖುದ್ದಾಗಿ ತಾ॥ 03–09–2026 ರಿಂದ ಸಂಘದ ಕಛೇರಿಯಲ್ಲಿ ಪಡೆಯಬಹುದು.
- ಸದಸ್ಯರ ವಿಳಾಸ ಮತ್ತು ವಾಟ್ಸಾಪ್ ಲಭ್ಯವಿರುವ ಮೊಬೈಲ್ (ಚರವಾಣಿ) ಬದಲಾಗಿದ್ದಲ್ಲಿ ದಯಮಾಡಿ ಕಾರ್ಯಾಲಯದಲ್ಲಿ ಅಥವಾ ವಿದ್ಯುನ್ಮಾನ ಅಂಚೆ (ಇ–ಮೇಲ್ : gnk.mandira@gmail.com) ಮುಖಾಂತರ ತಿಳಿಸಿ ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.